Publication : Udayavani
Date : May 13, 2008
Edition : All India

# ಜಿಪಿಎಸ್ ನೇವಿಗೇಷನ್ ಸಾಫ್ಟ್‌ವೇರ್ ಮಾರುಕಟ್ಟೆಗೆ

ಬೆಂಗಳೂರು, ಮೇ 12: ದೇಶದ ಪ್ರಮುಖ ನಗರಗಳು, ಅವುಗಳ ರಸ್ತೆ, ಪ್ರವಾಸಿ ತಾಣ ಸೇರಿದಂತೆ ರಾಜ್ಯ ಮತ್ತು ದೇಶದ ಭೌಗೋಳಿಕ ನಕ್ಷೆಯ ಮಾರ್ಗಸೂಚಿ ಈಗ ಮೊಬೈಲ್‌ನಲ್ಲಿ ಲಭ್ಯ.

ಪ್ರವಾಸಿಗರು, ಪ್ರಯಾಣಿಕರಿಗೆ ನೆರವಾಗುವಂತೆ ಮ್ಯಾಪ್ ಇಂಡಿಯಾ ಸಂಸ್ಥೆ ವಿನ್ಯಾಸಗೊಳಿಸಿರುವ, ಐನೇವ್ ಎಂಬ ಜಿಪಿಎಸ್ ನೇವಿಗೇಷನ್ ಸಾಫ್ಟ್‌ವೇರ್ ಮಾರುಕಟ್ಟೆಗೆ ಬಿಡುಗಡೆ ಆಗಿದೆ.

ಜಿಪಿಎಸ್ ಸೌಲಭ್ಯವಿರುವ ಮೊಬೈಲ್ ಫೋನ್‌ಗಳಲ್ಲಿ ಈ ನೇವಿಗೇಷನ್ ಸೌಲಭ್ಯ ಲಭ್ಯ ಎಂದು ಮ್ಯಾಪ್‌ಮೈ ಇಂಡಿಯಾ ವ್ಯವಸ್ಥಾಪಕ ನಿರ್ದೇಶಕ ರಾಕೇಶ್‌ವರ್ಮಾ ಇಂದು ಇಲ್ಲಿ ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು.

ಐನೇವ್‌ನ ಸಾಫ್ಟ್‌ವೇರ್ ಉತ್ಕೃಷ್ಟ ಗುಣಮಟ್ಟದ ನೇವಿಗೇಷನ್ ಸಾಫ್ಟ್‌ವೇರ್ ಕಲ್ಪಿಸುತ್ತಿದೆ ಎಂದ ಅವರು, ದೇಶದ ವಿಶಾಲ ಮಾರುಕಟ್ಟೆಗೆ ಐನೇವ್, ಐನೇವ್ ಕನೆಕ್ಟ್ ಆ್ಯಂಡ್ ಐನೇವ್ ಲೋಡೆಡ್ ಎಂಬ ಎರಡು ಯೋಜನೆ ಪ್ರಕಟಿಸಿದೆ ಎಂದರು.

ಐನೇವ್ ಕನೆಕ್ಟ್ ಯೋಜನೆ ಅಡಿಯಲ್ಲಿ ದೇಶದ ನೇವಿಗೇಷನ್ ಸೌಲಭ್ಯವನ್ನು ತಿಂಗಳಿಗೆ 249 ರೂ.ಶುಲ್ಕ ಭರಿಸಿ ಪಡೆದುಕೊಳ್ಳಬಹುದಾಗಿದೆ. ಆರು ತಿಂಗಳ ಸೇವೆಗೆ 1190 ರೂ. ಭರಿಸಬೇಕು ಎಂದು ಹೇಳಿದರು.



ಬೆಂಗಳೂರಿನಲ್ಲಿ ಸೋಮವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮ್ಯಾಪ್ ಇಂಡಿಯಾ ಸಂಸ್ಥೆ ಮುಖ್ಯಸ್ಥ ರಾಕೇಶ್ ವರ್ಮಾ ಐನೇವ್ ಎಂಬ ಜಿಪಿಎಸ್ ನೇವಿಗೇಷನ್ ಸಾಫ್ಟ್‌ವೇರ್ ಬಿಡುಗಡೆ ಮಾಡಿದರು.

ಐನೇವ್ ಲೋಡ್ ಯೋಜನೆ ಅಡಿಯಲ್ಲಿ 1190 ರೂ. ನೀಡಿ ರಾಜ್ಯದ ನಕ್ಷೆಯನ್ನು, 4490 ರೂ. ಭರಿಸಿ ದೇಶದ ನಕ್ಷೆಯನ್ನು ನಿರಂತರವಾಗಿ ಬಳಸಿಕೊಳ್ಳಬಹುದಾಗಿದೆ ಎಂದರು.

ನೇವಿಗೇಷನ್‌ನ ಐನೇವ್ ಕೀ ಸಾಫ್ಟ್‌ವೇರ್‌ನಲ್ಲಿ ಮೊಬೈಲ್‌ಫೋನ್‌ಗೆ ಜಿಪಿಎಸ್ ನೇವಿಗೇಷನ್ ಸೌಲಭ್ಯ, ಉಪಗ್ರಹದ ನೆರವಿನೊಂದಿಗೆ ನೀವು ಎಲ್ಲಿ ಇರುವಿರಿ ಎಂದು ತಿಳಿಯುವ, ಯಾವ ದಿಕ್ಕಿಗೆ ಪ್ರಯಾಣಿಸುತ್ತಿದ್ದೀರಿ, ಭೌಗೋಳಿಕ ನಕ್ಷೆಯ ಪ್ರತಿ ತಿರುವಿಗೂ ನಿಖರ ಧ್ವನಿ ಮಾಹಿತಿಯ ಮೂಲಕ ನಿಗದಿತ ಗುರಿ ಮುಟ್ಟಿಸುವ ಸೇವೆಯನ್ನು ಲಭ್ಯವಿದೆ.

ಐನೇವ್ ಮ್ಯಾಪ್ ಕವರೇಜ್ ಸಂಪೂರ್ಣ ಭಾರತದ ಮಾಹಿತಿ ಹೊಂದಿದೆ. 52 ವಿಭಾಗಗಳ, 280,000 ತಾಣಗಳು, ಅವುಗಳಲ್ಲಿ ಬೀದಿ,ನಗರ, ಪಟ್ಟಣ, ಹಳ್ಳಿಯ ಮಾಹಿತಿ, ಪೆಟ್ರೋಲ್ ಪಂಪ್, ಹೋಟೆಲ್, ಎಟಿಎಂ, ಪೊಲೀಸ್ ಠಾಣೆ ಮಾಹಿತಿ ಲಭ್ಯವಾಗಲಿದೆ.

ದೇಶದ 18 ಪ್ರಮುಖ ನಗರಗಳ ಬೀದಿಗಳು, ಬಡಾವಣೆಗಳು, ಉಪ ನಗರಗಳು, ಹಾಗೂ ಪ್ರಮುಖ ತಾಣಗಳ ನಿಖರ ಮಾಹಿತಿ ಈ ಮ್ಯಾಪ್ ಮಾರ್ಗಸೂಚಿಯಲ್ಲಿ ಲಭ್ಯವಾಗಲಿದೆ ಎಂದರು.